ಅವಕ್ಕೆ ವಿಶ್ವವಿದ್ಯಾಲಯದಿಂದ ಸಮ್ಮತಿಯೂ ಸಿಕ್ಕಿದ್ದರಿಂದ ನಿರಾಳವಾಗಿ ಉಸಿರಾಡಿದ್ದರು. ಈಗ ಪರೀಕ್ಷೆಗಾಗಿ ಓದುವುದೊಂದು ಬಾಕಿಯಿತ್ತು. ಕಾಲೇಜು ಸಿಟಿಯಿಂದ ಏಳು ಕಿಲೋಮೀಟರಿನಷ್ಟು ದೂರವಿದ್ದು, ಕ್ಯಾಂಪಸ್‌ನ ಒಳಗೇ ಹುಡುಗರ ಹಾಸ್ಟೆಲ್, ಹುಡುಗಿಯರ ಹಾಸ್ಟೆಲ್ ಮತ್ತು ಲೈಬ್ರರಿ, ಕ್ಯಾಂಟೀನ್ ಕೆಲವು ಸಿಬ್ಬಂದಿ ವರ್ಗದವರಿಗೆ ವಸತಿಗೃಹಗಳು ಇದ್ದವು. ಕಾಲೇಜಿನ ಮುಖ್ಯ ದ್ವಾರದ ಮುಂದೆ ಮುಖ್ಯ ರಸ್ತೆ ದಾಟಿದರೆ ಸಾಲಾಗಿ ಡಾಬಾಗಳು, ಸಣ್ಣ ಹೋಟೆಲ್‌ಗಳು, ಅಂಗಡಿಗಳು, ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಆ ಕೂಡಲೇ ಬೇಕಾಗುವ ವಸ್ತುಗಳು ಸಿಗುವಂತಿದ್ದು, ಮೂರು ನಾಲ್ಕು ಮೆಡಿಕಲ್ ಶಾಪುಗಳು ಇದ್ದವು. ಮೊದಲು ಖಾಲಿ ನಿವೇಶನಗಳಿದ್ದ ಜಾಗಗಳಲ್ಲಿ ಮನೆಗಳು ನಿರ್ಮಾಣವಾಗಿದ್ದು, ಅದೊಂದು ಪ್ರತ್ಯೇಕವಾದ ಊರಿನಂತಿತ್ತು.

ಶನಿವಾರದಂದು, ಸಾಕ್ಷಿ, ಮಾನಸಿ ಮತ್ತು ಮೀರಾ ಹಾಸ್ಟೆಲಿನ ಊಟ ಬೇಡವೆಂದು ಊಟಕ್ಕಾಗಿ ಸಿಟಿಗೆ ಬಂದಿದ್ದರು. ನಂತರ ಮಾನಸಿ ಮೀರಾ ಹಾಸ್ಟೆಲಿಗೆ ಬಂದಿದ್ದರು. ಸಾಕ್ಷಿ ತಾನು ಸ್ನೇಹಿತೆಯನ್ನು ಭೇಟಿಯಾಗಿ ಬರುವೆನೆಂದು ಅಲ್ಲಿಯೇ ಉಳಿದಿದ್ದಳು. ಅವಳು ಸೋಮವಾರ ಬೆಳಗ್ಗೆ ಕಾಲೇಜಿಗೂ, ಹಾಸ್ಟೆಲಿಗೂ ಬಾರದೇ ಇದ್ದದ್ದು ಗೆಳತಿಯರನ್ನು ಆತಂಕಕ್ಕೀಡು ಮಾಡಿತ್ತು. ಪರೀಕ್ಷೆ ಹತ್ತಿರ ಬರುತ್ತಾ ಇರೋ ಸಂದರ್ಭದಲ್ಲಿ ಸ್ನೇಹಿತೆ ಅಂತ ದಿನಗಟ್ಟಲೇ ಅಲ್ಲೇ ಉಳಿದಿದ್ದು ಬೇಸರ ತರಿಸಿತ್ತು. ಮೊಬೈಲ್‌ನಿಂದ ಕರೆ ಮಾಡಿದರೂ ಅವಳು ಉತ್ತರಿಸಿರಲಿಲ್ಲ. ಅವಳ ಸ್ನೇಹಿತೆ ಪೂರ್ಣಿಮಾಳಿಗೆ ಫೋನು ಮಾಡಿದರೂ ಅವಳೂ ಪ್ರತಿಕ್ರಿಯೆ ನೀಡಿರಲಿಲ್ಲ. ಒಮ್ಮೆಯೂ ಫೋನ್ ಎತ್ತಿಕೊಂಡು ಉತ್ತರಿಸುವ ಸೌಜನ್ಯ ತೋರಲಿಲ್ಲ. ಯಾವುದಕ್ಕೂ ಫೋನ್ ಮಾಡಿ ಹೇಳುತ್ತಿದ್ದವಳು, ಏನೂ ಹೇಳದೇ ಮೌನವಾಗಿ ಉಳಿದಳು. ಇವರು ಫೋನ್ ಮಾಡಿದರೂ ನಾಟ್ ರೀಚಬಲ್ ಆದ್ದರಿಂದ ಇವರೂ ಸುಮ್ಮನಾಗಿ ಬಿಟ್ಟಿದ್ದರು. ಆದರೆ ಸಾಕ್ಷಿ ಭಾನುವಾರ ಮುಗಿದು ಸೋಮವಾರವಾದರೂ ಹಾಸ್ಟೆಲಿಗೆ ಬರಲಿಲ್ಲ. ಇದು ಇಬ್ಬರಲ್ಲೂ ಆತಂಕ ಮೂಡಿಸಿತ್ತು. ಹಾಸ್ಟೆಲಿನಲ್ಲಿರೋ ಬೇರೆ ಹುಡುಗಿಯರಿಗೆ ಕೇಳಿದರೆ, ಅದೇ ಒಂದು ದೊಡ್ಡ ಸುದ್ದಿಯಾಗಿ, ವಾರ್ಡನ್ ಕಿವಿಗೇನಾದರೂ ಬಿದ್ದರೆ? ಸದ್ಯ ಹಾಗೆ ಆಗುವುದೇ ಬೇಡ ಎಂದು ಸಾಕ್ಷಿ ರೂಮಿಗೆ ಬಾರದ ಸುದ್ದಿ ಒಳಗೇ ಉಳಿಯಿತು. ಪರೀಕ್ಷೆಯ ಭಯದಿಂದ ಕೆಲವರು ರೂಮಿನೊಳಗೇ ಕುಳಿತುಕೊಂಡು ಓದುತ್ತಿದ್ದರೆ, ಕೆಲವರು ರೀಡಿಂಗ್ ರೂಮಿನಲ್ಲಿ ಕುಳಿತು ಓದುತ್ತಿದ್ದರು. ಜೂನಿಯರ್ ಹುಡುಗಿಯರಿಗೆ ಇದಾವುದರ ಅರಿವೂ ಇರಲಿಲ್ಲ.

ಸಂಜೆ, ಮಾನಸಿ ಕಾಲೇಜಿನಿಂದ ಬಂದವಳೇ ಸ್ನಾನಕ್ಕೆಂದು ಹೋಗಿದ್ದಳು. ಮೀರಾ ಅವಳಿಗಾಗಿ ಕಾಫಿ ಕುಡಿಯದೇ ಕಾತುರದಿಂದ ಕಾಯುತ್ತಾ ಕುಳಿತಿದ್ದಳು.

ಗಡಿಬಿಡಿಯಿಂದ ರೂಮಿನೊಳಗೆ ಬಂದ ಮಾನಸಿ, 'ಸ್ಸಾರಿ ಕಣೇ... ಪೋಸ್ಟ್‌ಮಾರ್ಟಂ ಹಾಲಿನಿಂದ ಬಂದ ಕೂಡಲೆ ಸ್ನಾನ ಮಾಡದೇ ಇರೋಕಾಗೊಲ್ಲಾ...' ಎನ್ನುತ್ತಾ ಟವಲಿನಿಂದ ತಲೆಗೂದಲನ್ನು ಒರೆಸಿಕೊಳ್ಳುತ್ತಾ ಮೀರಾಳ ಬಳಿ ಬಂದಳು.

ಮೀರಾ ಮುಖ ಊದಿಸಿಕೊಂಡು ಕುಳಿತಿದ್ದಳು.

'ಹೇಳಿದೆನಲ್ಲಾ ಸ್ಸಾರೀ ಅಂತ... ಬಾ... ಕಾಫಿ ಕುಡಿದು ಬರೋಣ...'

'ನೀನು ಹೀಗೆ ದಿನಕ್ಕೆರಡು ಬಾರಿ ಸ್ನಾನ ಮಾಡ್ತಾಯಿರು... ಸವೆದು ಹೋಗಿ, ಒಂದು ದಿನ ಮಾಯವಾಗಿ ಬಿಡ್ತೀಯಾ' ಎಂದು ಮೀರಾ ತನ್ನ ಅಸಹನೆಯನ್ನು ಹೊರಗೆ ಹಾಕಿದಳು.

'ಸದ್ಯ, ಈಗ ಮಾಯವಾಗಿರೋ ಸಾಕ್ಷಿ ಮರಳಿ ಬಂದರೆ ಸಾಕು' ಎಂದ ಮಾನಸಿ, ಮೀರಾಳನ್ನು ಎಳೆದುಕೊಂಡು ಮೆಸ್‌ನತ್ತ ನಡೆದಳು.

ಮೆಸ್ಸಿನಲ್ಲಿ ಟೇಬಲ್ಲಿನ ಮುಂದೆ ಅಲ್ಲಲ್ಲಿ ಕುಳಿತಿದ್ದ, ಹುಡುಗಿಯರು ಮಾತನಾಡುತ್ತಾ ನಗುತ್ತಾ ಕಾಫಿ ಕುಡಿಯುತ್ತಾ ಮಧ್ಯೆ ಮಧ್ಯೆ ಏನನ್ನೋ ತಿನ್ನುತ್ತಿದ್ದರು. ಮಾನಸಿ ಮತ್ತು ಮೀರಾ ಏನೂ ಮಾತನಾಡದೆ